ಖಾಸಗಿ ಹೋಮಿಯೋಪತಿ ಕಾಲೇಜುಗಳು ಕೇವಲ ಒಂದೆರಡು ಕೊಠಡಿಗಳಲ್ಲಿ ಯಾವ ಪ್ರಯೋಗಾಲಯ ಸೌಲಭ್ಯ, ತಜ್ಞ ಶಿಕ್ಷಕರು ಹಾಗೂ ಪುಸ್ತಕ ಭಂಡಾರಗಳಿಲ್ಲದೆ ಹೋಮಿಯೋಪತಿ ಶಿಕ್ಷಣ ಅವ್ಯವಸ್ಥೆಗೆ ಒಳಗಾಗಿರುವುದನ್ನು ಪ್ರತಿಭಟಿಸಿ ಈಗಾಗಲೇ ಹಲವು ಬಾರಿ ಸರದಿ ಉಪವಾಸ ಸತ್ಯಾಗ್ರಹ ಮುಷ್ಕರಗಳನ್ನು ಕೂಡ ನಡೆಸಿದ್ದಾರೆ. ಹಿಂದಿನ ಆರೋಗ್ಯ ಸಚಿವರ ಜೊತೆ ಹಾಗೂ ಮುಖ್ಯ ಮಂತ್ರಿಗಳ ಜೊತೆ ನಡೆದ ಮಾತುಕತೆಯಲ್ಲಿ ಸರ್ಕಾರಿ ಹೋಮಿಯೋಪತಿ ಕಾಲೇಜನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಇದಕ್ಕೆ ಹಿಂದಿನವರ್ಷ ೬೦ ಲಕ್ಷ ರೂಪಾಯಿಗಳನ್ನು ವಿಮೋಸಲಟ್ಟಿದ್ದರೂ ವ್ಯಯ ಮಾಡದೆ ಇದ್ದು ವ್ಯರ್ಥವಾಗಿದೆ. ಈಗ ಹೋಮಿಯೋಪತಿ ಕಾಲೇಜನ್ನು ಆರಂಭ ಮಾಡದೆ ವಿಶ್ವ ವಿದ್ಯಾನಿಲಯದ ಅಫಿಲಿಯೇಷನ್ ನಂತರವೇ ಕಾಲೇಜನ್ನು ಆರಂಭಿಸಲಾಗುವುದೆಂದು ಹೇಳಲಾಗುತ್ತಿದೆ. ಆದರೆ ಈ ಅಫಿಲಿಯೇಷನ್ ಅಗತ್ಯವಿಲ್ಲದ ಡಿಪ್ಲೊಮೊ ಕೋರ್ಸ್‌ಗಳನ್ನು ಆರಂಭ ಮಾಡಲು ಮಾಡಲು ಯಾವ ಆತಂಕವಿಲ್ಲದಿದ್ದರೂ ಆ ಬಗ್ಗೆ ಆರೋಗ್ಯ ಸಚಿವಾಲಯ ಇನ್ನೂ ಕ್ರಮ ಕೈಗೊಂಡಿಲ್ಲ. ನೂರಾರು ವಿದ್ಯಾರ್ಥಿಗಳ ಶಿಕ್ಷಣ ಒಂದು ವರ್ಷದಿಂದಲೂ ಈ ಕಾರಣಕ್ಕಾಗಿ ಮೂಲೆ ಗುಂಪಾಗಿದೆ. ಸರ್ಕಾರ ಈಗಾಗಲೇ ತೀರ್ಮಾನ ಕೈಗೊಂಡಿರುವಂತೆ ಸರ್ಕಾರಿ ಹೋಮಿಯೋಪತಿ ಕಾಲೇಜನ್ನು ಕೂಡಲೇ ಆರಂಭಿಸಿ ಈ ಹೋಮಿಯೋಪತಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇದರ ಜೊತೆಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಫೋಟೋ ಸಹ ಕಳುಹಿಸುಕೊಡುತ್ತೇನೆ.. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳುತ್ತೇನೆ.

ಡಾ||ಹೆಚ್.ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರ ಸರ್ಕಾರದ ಗಮನಕ್ಕೆ ಬಂದ ಮೇಲೆ ಹೋಮಿಯೋಪತಿ ಕಾಲೇಜನ್ನು ಪ್ರಾರಂಭ ಮಾಡತಕ್ಕಂಥ ಕಾಲದಲ್ಲಿ ಸರ್ಕಾರದ ಅನುಮತಿಯನ್ನು ಪಡೆದುಕೊಂಡಿಲ್ಲ. ಕಳೆದ ಸಾರಿ ವಿಶ್ವವಿದ್ಯಾನಿಲಯಕ್ಕೆ ಅಫಿಲೇಯೇಷನ್ ಪಡೆದುಕೊಂಡಿಲ್ಲ. ಈ ಸಾರಿ ನಾವು ಅಫಿಲಿಯೇಷನ್ ಪಡೆದುಕೊಳ್ಳುವುದಕ್ಕಾಗಿ ನಮ್ಮ ಇಲಾಖಾ ಡೈರೆಕ್ಟರ್‌ರವರ ಮೂಲಕ ಅರ್ಜಿಯನ್ನು ಹಾಕಿಸಿದ್ದೇವೆ. ಬಹುಶಃ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಅಫಿಲಿಯೇಷನ್ ಪಡೆದುಕೊಂಡು ಜನವರಿ ಅಥವಾ ಫಾರ್ಚಿ ವೇಳೆಗೆ ಆ ಹೋಮಿಯೋಪತಿ ಕಾಲೇಜನ್ನು ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರು ಡಿಪ್ಲೊಮೋ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಡಿಪ್ಲೊಮೊ ಕೋರ್ಸ್‌ಗಳು ಇಲ್ಲ. ನಾವೆ ಸರ್ಕಾರೀ ಹೋಮಿಯೋಪತಿ ಕಾಲೇಜನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇನೆ.

(iv) ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕರು ಕಬ್ಬು ಪೂರೈಕೆದಾರರಿಗೆ ಹಣ ಪಾವತಿ ಮಾಡದೇ ಇರುವ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇರುವ ಎಲ್ಲ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ಮಂಡಳಿಯವರು ಕಾರ್ಖಾನೆಗೆ ಪೂರೈಸಿದ ಕಬ್ಬಿನ ಬಿಲ್ಲನ್ನು ಕಬ್ಬು ಪೂರೈಕೆದಾರರಿಗೆ ಪಾವತಿ ಮಾಡದೆ ಇರುವುದರಿಂದ ಬರಗಾಲದಿಂದ ಬಳಲುತ್ತಿರುವ ಬಡ ರೈತ ಜನರಿಗೆ ಸಾಕಷ್ಟು ಹಣಕಾಸಿನ ತೊಂದರೆಯಾಗುತ್ತಿದ್ದು ಸೆಪ್ಟೆಂಬರ್ ತಿಂಗಳ ಮೊದಲನೆ ವಾರದೊಳಗಾಗಿ ಎಲ್ಲ ಸಕ್ಕರೆ ಕಾರ್ಖಾನೆಯವರಿಗೆ ೧೯೮೫-೮೬ನೇ ಸಾಲಿನ ಸಂಪೂರ್ಣ ಕಬ್ಬಿನ ಬಿಲ್ಲನ್ನು ಪಾವತಿ ಮಾಡಲು ಸರಕಾರದಿಂದ ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಈ ಸೂಚನೆ ನೀಡುತ್ತೇನೆ. ಕಬ್ಬು ಪೂರೈಕೆದಾರರು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದು ಶುಗರ್ ಡೈರೆಕ್ಟರ್ ಈ ವಿಷಯದಲ್ಲಿ ಶೀಘ್ರ ಮಾಹಿತಿಯನ್ನು ತರಿಸಿಕೊಂಡು ಕಬ್ಬು ಪೂರೈಕೆದಾರರ ತೊಂದರೆಯನ್ನು ನಿವಾರಣೆ ಮಾಡಲು ಕ್ರಮ ಕೈಕೊಳ್ಳುವಂತೆ ಸಹಕಾರ ಮಂತ್ರಿಗಳು ಆದೇಶ ನೀಡಿ ಹಣವನ್ನು ಪಾವತಿ ಮಾಡುವಂತೆ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಸಂಬಂಧವಾಗಿ ಸಂಬಂಧಪಟ್ಟ ಇಲಾಖೆಯ ಡೈರೆಕ್ಟರ್ ಅನ್ನು ಕರೆಸಿ ಸೂಕ್ತ ಸೂಚನೆಯನ್ನು ಕೊಡುತ್ತೇನೆ.